ಕಂಡ್ರೆ ನನ್ಗೆ ಕೂಡ್ಲೆ ಗೊತ್ತಾಗುತ್ತೆ."

ಈ ರಸ್ತೆಯಲ್ಲಿ ಹೋಗುವ ಮಂದಿ ಪರಿಚಯ ಇದೆಯಾ ಅಂತ ಕೇಳಿದ್ದಕ್ಕೆ ಅವ್ನು ದೀರ್ಘ ವಿವರಣೆ ನೀಡಿದ.

"ಆದ್ರೆ ಮೊನ್ನೆ ಸಂಜೆ ಒಂದು ವಿಚಿತ್ರ ಗಮನಿಸ್ದೆ. ಟ್ರಾಕ್ಟರು ಹೊಡೆದುಕೊಂಡು ಒಬ್ಬ ನೇಪಾಳಿ ಚಹರೆಯ ವ್ಯಕ್ತಿ ಬಂದಿದ್ದ. ಅವ್ನ ಟ್ರಾಕ್ಟರಿನಲ್ಲಿ ದೊಡ್ಡದೊಂದು ಮರದ ಪೆಟ್ಟಿಗೆಯಿತ್ತು. ಭಾರೀ ಗಾತ್ರದ್ದು ಅದು. ಪೆಟ್ಟಿಗೆಯಲ್ಲಿ ಗೊಬ್ಬರ ತರೋದು ನನ್ಗೆ ಇದುವರೆಗೂ ಗೊತ್ತಿಲ್ಲ."

"ಅವ್ನು ಎಷ್ಟು ಹೊತ್ತಿಗೆ ವಾಪಸ್ಸು ಹೋದ? ಗೊಬ್ಬರದೋನಾಗಿದ್ರೆ ಮಾಲು ಇಳಿಸಿ, ಕೂಡ್ಲೆ ಹಿಂದಿರುಗಬೇಕಲ್ವೆ?"

**ಅಷ್ಟರಲ್ಲಿ ಗೆಜ್ಜೆ ದನಿ ತೇಲಿ ಬಂತು! ಕರಮಚಂದ ಚಕ್ಕನೆ ಉಯಿಲನ್ನು ಯಥಾ ಸ್ಥಾನದಲ್ಲಿರಿಸಿ, ಡ್ರಾಯರ್ ಮುಚ್ಚಿದ.**

**"ಪತ್ತೇದಾರರು ಆಗ್ಲೇ ತನಿಖೆ ಶುರು ಮಾಡ್ದ ಹಾಗಿದೆ? ಮೋಹಿತನ ಬಗ್ಗೆ ಏನಾದ್ರೂ ಗೊತ್ತಾಯ್ತಾ?"**

ಆ ಮನುಷ್ಯ ವಾಪಸ್ಸು ಹೋಗಿದ್ದು ತಾನು ನೋಡಿಲ್ಲ ಎಂದ ಅವ್ನು ತಾನು ಚರವಾಣಿಯಲ್ಲಿ ಕ್ಲಿಕ್ಕಿಸಿದ್ದ ಆ ವ್ಯಕ್ತಿಯ ಚಿತ್ರವನ್ನು ಕರಮಚಂದನಿಗೆ ನೀಡಿದ.

ನಾವು ತಾಪಂಡ ಮೋಹಿತನ ಮನೆ ತಲುಪಿದಾಗ, ಹೂಗಳ ಪಾತಿ ಸರಿಪಡಿಸುತ್ತಿದ್ದ ಆಳು ನಮ್ಮತ್ತ ಪ್ರಶ್ನಾರ್ಥಕ ದೃಷ್ಟಿ ಬೀರಿದ. ಚಿಕ್ಕನಂಜಪ್ಪ ಅಂತ ಹೆಸರು ಹೇಳಿದ ಅವ್ನು ಕೆಲವು ಮಾಹಿತಿ ನೀಡಿದ. ಮೋಹಿತ್ ನಾಪತ್ತೆಯಾದ ದಿನ ತಾನು ಮಡಿಕೇರಿಗೆ ಹೋಗಿದ್ದಾಗಿ ಹೇಳ್ದ. ಮೋಹಿತ್, ವರ್ಷಿಣಿ ನಡುವೆ ಜಗಳ ಮಾಮೂಲು, ಯಜಮಾನರು ಹೆಚ್ಚಾಗಿ ತಮ್ಮ ರೂಮಿನಲ್ಲೇ ಬಾಗಿಲು ಹಾಕಿ ಕೂತಿರುತ್ತಾರೆ, ಎಸ್ಟೇಟ್ ಎಲ್ಲಾ ನೋಡಿಕೊಳ್ಳೋದು ಮೇಡಮ್ ಅಂತ ತಿಳಿಸಿದ. ಕೆಲವೊಮ್ಮೆ ಯಜಮಾನರು ಎದುರಿಗಿರೋ ಕಾಡಿಗೆ ಹೋದ್ರೆ, ದಿನಗಟ್ಟಲೇ ಬರದೇ ಇರುವುದುಂಟು!

ಉತ್ತಮ ಅಭಿರುಚಿಯಲ್ಲಿ ವಿನ್ಯಾಸಗೊಳಿಸಿದ, ಸೊಗಸಾದ ಹಜಾರ. ವರ್ಷಿಣಿಗಾಗಿ ಹಜಾರದಲ್ಲಿ ಕಾಯುತ್ತಾ ಕುಳಿತಿದ್ದಾಗ, ನಾನು ಹಜಾರದಲ್ಲಿ ದಿಟ್ಟಿ ಹರಿಸಿದೆ. ನಾನು ತೇಗದ ಮೇಜಿನ ಸೌಂದರ್ಯ ಸವಿಯುತ್ತಿದ್ದರೆ, ಕರಮಚಂದ ಅದರ ಸೆಳೆಖಾನೆ ಎಳೆದು, ತಡಕಾಡುತ್ತಿದ್ದ! 'ಓಹ್' ಎಂಬ ಉದ್ಗಾರದೊಂದಿಗೆ, ಕರಮಚಂದ ಕಡತವೊಂದನ್ನು ಹೊರ ತೆಗೆದ. ಅದರೊಳಗೆ ಇದ್ದಿದ್ದು ಮೋಹಿತನ ಉಯಿಲು! ನಾನು ಅದರಲ್ಲಿ ನಜರು ಓಡಿಸಿದೆ,

"ನೋಡು! ವರ್ಷಿಣಿಗೆ ಏನೂ ಸಿಗದು!! ಮುಕ್ಕಾಲು ಪಾಲು ಶ್ರೀಧಾಮ ಆಶ್ರಮಕ್ಕೆ. ಒಂದು ಪಾಲು ಸೋಮಯ್ಯನಿಗೆ!!"

ಪಿಸುಗುಟ್ಟುವಂತೆ ಹೇಳಿದಾಗ ಕರಮಚಂದ ತುಟಿ ಎರಡು ಮಾಡಿದ,

"ಇದಕ್ಕೆ ಸಹಿಯೇ ಆಗಿಲ್ಲ! ಅದಕ್ಕೆ ಮೊದಲೇ ನಾಪತ್ತೆಯಾಗಿದ್ದಾನೆ!!"

ಅಷ್ಟರಲ್ಲಿ ಗೆಜ್ಜೆ ದನಿ ತೇಲಿ ಬಂತು! ಕರಮಚಂದ ಚಕ್ಕನೆ ಉಯಿಲನ್ನು ಯಥಾ ಸ್ಥಾನದಲ್ಲಿರಿಸಿ, ಡ್ರಾಯರ್ ಮುಚ್ಚಿದ.